ಶ್ರೀ ಹೆಚ್. ಡಿ. ದೇವೇಗೌಡ.—(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ಈ ಯೋಜನೆಯು ತಾಂತ್ರಿಕವಾಗಿ ಸೂಕ್ತವಲ್ಲವೆಂದು ತಿಳಿದು ಬಂದಿರುವ ಕಾರಣ, ಉತ್ತರ ಉದ್ಭವಿಸುವುದಿಲ್ಲ.

ಇ) ಆ ಪ್ರಶ್ನೆಯ ಉತ್ತರದಿಂದ ಉದ್ಭವಿಸುವುದಿಲ್ಲ.

ವಿಷಯ : ನಾಯಕ ಜನಾಂಗವನ್ನು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿಸುವುದು

ಪ್ರ. ಸಂಖ್ಯೆ 557 (1480) ಶ್ರೀ ಎನ್. ಜಿ. ನಾಯ್ಕ (ಮೊಳಕಾಲ್ಮೂರು) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) 1978ರಲ್ಲಿ ಸರ್ಕಾರವು 'ನಾಯಕ' ಎಂಬ ಜಾತಿಯನ್ನು ಹಿಂದುಳಿದ ಬುಡಕಟ್ಟು ಜನಾಂಗದ ಪಟ್ಟಿಯಿಂದ ತೆಗೆದು ಪರಿಶಿಷ್ಟ ವರ್ಗಕ್ಕೆ ಸೇರಿದೆಯೆಂದು ಮತ್ತು ಅದರ ಸಮಾನ ಜಾತಿಗಳನ್ನು ಹಿಂದುಳಿದ ಬುಡಕಟ್ಟು ಜನಾಂಗದ ಪಟ್ಟಿಯಲ್ಲಿ ಸೇರಿದೆಯೆಂದು ಹೇಳಿರುವುದು ನಿಜವೆ ;

ಆ) ಹಾಗಿದ್ದಲ್ಲಿ 'ನಾಯಕ' ಜಾತಿಯ ಸರಿಸಮಾನ ಹೆಸರುಗಳನ್ನು ನಾಯಕ ಜನಾಂಗಕ್ಕೆ ಸೇರಿದವೆಂದು ಒಪ್ಪಿದಂತಾಗಲಿಲ್ಲವೇ ಮತ್ತು ಈ ಸರಿಸಮಾನ ಹೆಸರುಗಳೆಲ್ಲಾ 'ನಾಯಕ' ಜಾತಿಗೆ ಸೇರಿದ ಪರಿಶಿಷ್ಟ ವರ್ಗವೆಂದು ಪರಿಗಣಿಸಬೇಕಲ್ಲವೆ';

ಇ) ಹಾಗಿದ್ದಲ್ಲಿ, ಇಲ್ಲಿಯವರೆಗೂ ಈ ವಿಷಯದ ಬಗ್ಗೆ ತೀರ್ಮಾನ ಮಾಡದಿರುವುದಕ್ಕೆ ಕಾರಣವೇನು ?

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಸಚಿವೆ).—

ಅ) ನಿಜ.

ಆ) ಈ ಬಗ್ಗೆ ಅಂತಿಮ ತೀರ್ಮಾನ ಕೇಂದ್ರ ಸರ್ಕಾರದ್ದು. ರಾಜ್ಯ ಸರ್ಕಾರವು ಈ ಬಗ್ಗೆ ಪರಿಶೀಲನೆ ಮಾಡುತ್ತಿದೆ.

ಇ) ಮೇಲಿನ ಉತ್ತರದಿಂದ ಇದಕ್ಕೆ ಉತ್ತರ ಉದ್ಭವಿಸುವುದಿಲ್ಲ.

ವಿಷಯ : ಮೊಳಕಾಲ್ಮೂರು ತಾಲ್ಲೂಕಿನಲ್ಲಿ ರಂಗಯ್ಯನ ದುರ್ಗ ಯೋಜನೆ

ಪ್ರ. ಸಂಖ್ಯೆ 558 (1402) ಶ್ರೀ ಎನ್. ಜಿ. ನಾಯ್ಕ (ಮೊಳಕಾಲ್ಮೂರು) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿ ರಂಗಯ್ಯನ ದುರ್ಗ ಯೋಜನೆಯನ್ನು ಮಂಜೂರ್ಮಾಡಿದ್ದಾರೆಯೆ ? ಹಾಗಿದ್ದಲ್ಲಿ ಈ ಯೋಜನೆ ಯಾವಾಗ ಪ್ರಾರಂಭವಾಯಿತು, ಹಾಗೂ ಇದರ ಅಂದಾಜು ವೆಚ್ಚ ಎಷ್ಟು :

ಆ) ಮೊಳಕಾಲ್ಮೂರು ಬರಗಾಲ ಪೀಡಿತ ಪ್ರದೇಶವಾಗಿರುವುದರಿಂದ ಸದರಿ ಯೋಜನೆಯನ್ನು ತ್ವರಿತವಾಗಿ ಪೂರ್ತಿಗೊಳಿಸಲಾಗುವುದೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಮಂಜೂರಾತಿಯನ್ನು ಇನ್ನೂ ನೀಡಬೇಕಾಗಿದೆ. ಈ ಯೋಜನೆಯು 1975–76ನೇ ಸಾಲಿನಲ್ಲಿ ಪ್ರಾರಂಭವಾಯಿತು. ಅಂದಾಜು ವೆಚ್ಚ 640 ಲಕ್ಷ ರೂ.ಗಳು (1982–83ರ ದರಗಳು).

ಆ) ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ವಿಷಯ : ಶಹಬಾದ್ ಕ್ಷೇತ್ರದಲ್ಲಿ ನೀರಾವರಿ ಯೋಜನೆ

ಪ್ರ. ಸಂಖ್ಯೆ 559 (1568) ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್) ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ಶಹಾಬಾದ್ ಕ್ಷೇತ್ರವು ಭೀಮಾನದಿ ಮತ್ತು ಕಾಗಿನಾ ನದಿ ದಂಡೆಗಳ ಉದ್ದಕ್ಕೂ ಹರಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ. ಭೀಮಾನದಿಯ ದಂಡೆಯ ಮೇಲೆ ಬರುವ ಯಾವ ಗ್ರಾಮಗಳಿಗೆ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದೆ ;

ಇ. ಉಳಂಡಗೀರಾ, ಕೊಲ್ಲೂರು, ಕುಂದನೂರ, (ತಾಲ್ಲೂಕಾ ಚಿತ್ರವು) ಮತ್ತು ನವಿ ನಿಣ್ಣೂರ ಮಾಯನಾಳ (ಗುಲ್ಬರ್ಗ ತಾಲ್ಲೂಕ್) ಇವುಗಳನ್ನು ಏತ ನೀರಾವರಿ ಯೋಜನೆಯಲ್ಲಿ ತೆಗೆದುಕೊಳ್ಳುವ ಸಾಧ್ಯತೆ ಇದೆಯೇ ಮತ್ತು ಪ್ರತಿಯೊಂದು ಹಳ್ಳಿಯ ಏತ ನೀರಾವರಿ ಯೋಜನೆಗೆ ತಗಲುವ ವೆಚ್ಚವೆಷ್ಟು ;